# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 2083

ಉತ್ತರಿಸಬೇಕಾದ ದಿನಾಂಕ: 25.03.2026

ಸದಸ್ಯರ ಹೆಸರು: ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು: ಕಂದಾಯ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಭೂ ದಾಖಲೆಗಳನ್ನು (ಆರ್‌ಟಿಸಿ/ಪಹಣಿ) ಸಮಯಕ್ಕೆ ಸರಿಯಾಗಿ ನವೀಕರಿಸದಿರುವುದು ರೈತರಿಗೆ ಸಾಲ ಮತ್ತು ಬೆಳೆ ವಿಮೆಗಾಗಿ ತೊಂದರೆ ಉಂಟು ಮಾಡುತ್ತಿದೆಯೇ; | ಭೂ ದಾಖಲೆಗಳನ್ನು (ಆರ್‌ಟಿಸಿ/ಪಹಣಿ) ಸಮಯಕ್ಕೆ ಸರಿಯಾಗಿ ಕಾಲೋಚಿತಗೊಳಿಸಲು ಭೂಮಿ ತಂತ್ರಾಂಶ ಮತ್ತು ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲಾಗಿರುತ್ತದೆ. ಅದರಂತೆ ಕಾವೇರಿ ತಂತ್ರಾಂಶದಲ್ಲಿ ನೋಂದಣಿ ಮಾಡುವಾಗ ಭೂಮಿ ತಂತ್ರಾಂಶದಿಂದ ಮಾಹಿತಿಯನ್ನು fetch ಮಾಡಲಾಗುತ್ತದೆ ಹಾಗೂ ನೋಂದಣಿಯಾದ ನಂತರ ಸದರಿ ಮಾಹಿತಿಯನ್ನು ಆಗಿಂದಾಗ್ಗೆ ಭೂಮಿ ತಂತ್ರಾಂಶಕ್ಕೆ ವರ್ಗಾಯಿಸಲಾಗುತ್ತದೆ.<br>ಮುಂದುವರೆದು ಎಲ್ಲಾ ನೋಟೀಸು ರಹಿತ ಹಾಗೂ ನೋಟೀಸು ಸಹಿತ ಮ್ಯುಟೇಶನ್ ಗಳು ಸರ್ವರ್ ಸಹಿ ಮೂಲಕ ಸ್ವಯಂಚಾಲಿತವಾಗಿ ಅನುಮೋದನೆಯಾಗುವಂತೆ ಭೂಮಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲಾಗಿರುತ್ತದೆ. |
| ಆ) | 10-15 ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಇರುವ ಭೂ ಮಾಲೀಕತ್ವದ ವಿವಾದಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ; | ದಿನಾಂಕ:01.06.2006 ಕ್ಕಿಂತ ಮೊದಲು ನೋಂದಣಿಯಾಗಿರುವ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಪಹಣಿ ದಾಖಲಿಸಲು ಸುತ್ತೋಲೆ ಸಂಖ್ಯೆ:RD 103 MRR 2002 ದಿನಾಂಕ:29-12-2009 ಮತ್ತು RD 99 MRR 2011 ದಿನಾಂಕ:24-12-2011 ರಂತೆ ಭೂಮಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.<br>ಮುಂದುವರೆದು, ಕೃಷಿ ಜಮೀನು ನೋಂದಣಿಯಾಗಿದ್ದು ಭೂಮಿ ತಂತ್ರಾಂಶಕ್ಕೆ ಸ್ವೀಕೃತವಾಗದಿದ್ದಲ್ಲಿ, ಸದರಿ "ಜೆ" ನಮೂನೆಗಳನ್ನು ರೀ-ಪುಶ್ ಮಾಡಲು ಅವಕಾಶ ವಿರುತ್ತದೆ. |
| ಇ) | ನೋಂದಾಯಿತ ಭೂ ವಹಿವಾಟಿನ ನಂತರವೂ ಎಷ್ಟು ರೈತರು ರೂಪಾಂತರ ನಮೂದುಗಳಿಗಾಗಿ ಕಾಯುತ್ತಿದ್ದಾರೆ; | ಕಾವೇರಿ ತಂತ್ರಾಂಶದ ಮೂಲಕ ನೋಂದಣಿಯಾಗಿ ಭೂಮಿ ತಂತ್ರಾಂಶಕ್ಕೆ ಸ್ವೀಕೃತವಾಗುವ ಜೆ-ನಮೂನೆಗಳಿಗೆ ಸಂಬಂಧಿಸಿದಂತೆ ಯಾವುದೇ ತಕರಾರು ಸ್ವೀಕೃತವಾಗದಿದ್ದಲ್ಲಿ 7 ದಿನಗಳ ನೋಟಿಸು ಅವಧಿಯ |

| | | |
|---|---|---|
| | | ನಂತರ ನಿಯಮಾನುಸಾರ ಖಾತೆ ದಾಖಲು ಮಾಡಲಾಗುವುದು.<br><br>ಒಂದು ವೇಳೆ ಯಾವುದೇ ತಕರಾರು ಸ್ವೀಕೃತವಾದಲ್ಲಿ, ಸದರಿ ಮ್ಯುಟೇಶನ್ ನ್ನು RCCMS ತಂತ್ರಾಂಶದ ಮೂಲಕ ತಹಶೀಲ್ದಾರರ ನ್ಯಾಯಾಲಯಕ್ಕೆ ವರ್ಗಾಯಿಸಲಾಗುವುದು. ತಹಶೀಲ್ದಾರರ ವಿಚಾರಣೆಯ ನಂತರನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.<br><br>ಅದರಂತೆ ಜಮೀನು ನೋಂದಣಿಯಾಗಿ ಭೂಮಿ ತಂತ್ರಾಂಶಕ್ಕೆ ಸ್ವೀಕೃತವಾದ ನಂತರ ಯಾವುದೇ ರೀತಿ ವಿಳಂಬವಾಗುವುದಿಲ್ಲ. |
| ಈ) | ಅತಿಕ್ರಮಣ ಮತ್ತು ನಕಲಿ ದಾಖಲೆಗಳನ್ನು ತಡೆಗಟ್ಟಲು ಎಲ್ಲಾ ಕೃಷಿ ಭೂಮಿಯನ್ನು ಡಿಜಿಟಲ್ ನಕ್ಷೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; | ಹೌದು. |

ಕಂಇ 129 ಎಂಆರ್‌ಆರ್ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು